# ಫುಸ್ಕೋಸ್ ಶಾಲೆ[ಐಸಿಎಸ್ಇ]

ಇಂದಿರನಗರ ಬೆಂಗಳೂರು

ವಾರ್ಷಿಕ ಪರೀಕ್ಷೆ 2016- 2017

ವಿಷಯ : ದ್ವಿತೀಯ ಭಾಷೆ ಕನ್ನಡ

**ತರಗತಿ : 5** **ಅಂಕಗಳು : 80**

---

**I. ಅರ್ಥ ಬರೆಯಿರಿ :–** **5**

1. ಪ್ರವರ್ತಕ
2. ಭಗ್ನ
3. ನಿರ್ಮಾಣ
4. ಕಾನನ
5. ರೋಧನ
6. ವಿದ್ವಾಂಸ
7. ವಾಚನ
8. ಸಮಂಜಸ
9. ಹಿರಿಯರು
10. ಸಜ್ಜನರು

**II. ವಿರುದ್ಧ ಪದ ಬರೆಯಿರಿ :–** **6**

1. ಪ್ರೀತಿ X
2. ಶಾಂತಿ X
3. ರಕ್ಷಿಸು X
4. ನಾಶ X
5. ದೂರ X
6. ಸಜ್ಜನ X

**III. ಸ್ತ್ರೀ ಲಿಂಗ ರೂಪದಲ್ಲಿ ಬರೆಯಿರಿ :–** **3**

1. ತಂದೆ
2. ಬಾಲಕ
3. ಕವಿ
4. ಚಿಕ್ಕಪ್ಪ
5. ಸ್ನೇಹಿತ
6. ಮಗ

**IV. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ :–** **2**

1. ಅತ್ಯುನ್ನತ =
2. ಕಲಿಯುತ್ತಿರಲಿಲ್ಲ =
3. ಸರ್ವೋದಯ =
4. ಶತಮಾನೋತ್ಸವ =

**V. ಈ ಅಕ್ಷರಗಳನ್ನು ಜೋಡಿಸಿ ಸರಿಯಾದ ಪದ ಬರೆಯಿರಿ :–** **2**

1. ದಾಕಾರಿಡು –
2. ರುಹಿಯರಿ –
3. ಯಳೆರುಗೆ –
4. ರರೋಡೆದಕೋ –

**VI. ಮಾದರಿಯಂತೆ ಬದಲಾಯಿಸಿ ಬರೆಯಿರಿ :–** **4**

ಮಾದರಿ : ಮೂವರು ಗೆಳೆಯರು ಒಟ್ಟಾಗಿ ಇರುತ್ತಿದ್ದರು.
ಗೆಳೆಯರು ಮೂವರು ಒಟ್ಟಾಗಿ ಇರುತ್ತಿದ್ದರು.

1. ಯಜಮಾನನು ಮೂವರು ಗೆಳೆಯರನ್ನು ಬಂಧಿಸಿದನು.
2. ದರೋಡೆಕೋರನು ಗೆಳೆಯರನ್ನು ಹಿಂಬಾಲಿಸಿದನು.
3. ನಾವು ಮುತ್ತುಗಳನ್ನು ಮಾರಿದರೆ ಶ್ರೀಮಂತರಾಗಬಹುದು.
4. ಪರ್ವತವನ್ನು ಏರಲು ಎಲ್ಲರೂ ಸಿದ್ಧರಾದರು.

**VII. ಬಹು ವಚನದಲ್ಲಿ ಬರೆಯಿರಿ :–** **2**

1. ಪ್ರಶಸ್ತಿ –
2. ಸೇವಕ –
3. ನಾನು –
4. ರಾಜ –

**VIII. ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ :–** **5**

1. ಬಾನು -
2. ಭಾನು –
3. ಪ್ರಭಾವ –
4. ಭಗ್ನವಾದ –
5. ಸಾಧಿಸು

**IX. ಈ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ. :–** **5**

ಸಜ್ಜನರ ಸಂಗವದು _______________
______________________________
__________________________ ಸರ್ವಜ್ಞ
ಬಲ್ಲವರ _________________________
_______________________________
___________________ ಹಾದಂತೆ ಸರ್ವಜ್ಞ.

**X. ಬಿಟ್ಟಿರುವ ಸ್ಥಳಗಳನ್ನು ತುಂಬಿರಿ :–** **6**

1. ಕ್ರೈಸ್ತರ ಧರ್ಮಗ್ರಂಥ ____________
2. ಹಂಪೆಯನ್ನು ಎಂಟನೆಯ ಶತಮಾನದ ಶಾಸನದಲ್ಲಿ _______ ಕ್ಷೇತ್ರವೆಂದು ಕರೆದಿದ್ದಾರೆ.
3. ಕುವೆಂಪುರವರ ಪೂರ್ಣ ಹೆಸರು ___________
4. ಆಹಾರದ ವ್ಯವಸ್ಥೆಗಾಗಿ _______ ರನ್ನು ನೇಮಿಸಲಾಯಿತು.
5. ಒಂದಾನೊಂದು ಕಾಲದಲ್ಲಿ ಮೂವರು ಸ್ನೇಹಿತರು _________
6. " ಶ್ರೀ ರಾಮಾಯಣ ದರ್ಶನಂ " ಮಹಾಕಾವ್ಯಕ್ಕೆ ದೊರೆತ ಅತ್ಯುನ್ನತ ಪ್ರಶಸ್ತಿ ____________

**XI. ಎಂಟು ದಿಕ್ಕುಗಳ ಹೆಸರುಗಳನ್ನು ಕನ್ನಡದಲ್ಲಿ ಬರೆಯಿರಿ :-** **4**

**XII. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ :-** **10**

1. ಕ್ರೈಸ್ತಧರ್ಮದ ಪ್ರವರ್ತಕ ಯಾರು ?
2. ಹಂಪೆಯು ಯಾವ ಜಿಲ್ಲೆಯಲ್ಲಿದೆ ?
3. ಯಾವುದು ಮಾನವನಿಗೆ ಅಪೂರ್ವ ಕೊಡುಗೆ ?
4. ಬಾಲಕ ರಾಮಕೃಷ್ಣನ ಅಳುವ ಶಬ್ಧ ಯಾರಿಗೆ ಕೇಳಿಸಿತು ?
5. ಅದ್ಭುತವಾದ ನಾಡಗೀತೆಯನ್ನು ರಚಿಸಿದವರು ಯಾರು ?
6. ರಾಜನು ಪ್ರಜೆಗಳ ಕಷ್ಟ ಸುಖಗಳನ್ನು ಹೇಗೆ ತಿಳಿದುಕೊಳ್ಳುತ್ತಿದ್ದನು ?
7. ಹಳ್ಳಿಯ ಯಜಮಾನನ ಮನೆಯಲ್ಲಿ ಏನಿತ್ತು ?
8. ಸಜ್ಜನರ ಸಂಗವು ಹೇಗಿರುತ್ತದೆ ?
9. ದುರ್ಜನರ ಸಂಗವು ಹೇಗಿರುತ್ತದೆ ?
10. ಮೂವರು ಸ್ನೇಹಿತರು ಯಾರು ಯಾರು ?

**XIII. ಈ ಕೆಳಗಿನ ಪ್ರಶ್ನೆಗಳಿಗೆ ೨/೩ ವಾಕ್ಯದಲ್ಲಿ ಉತ್ತರಿಸಿರಿ :-** **10**

1. ಸಾಧುವನ್ನು ಕಂಡ ಬಾಲಕ ಅವನನ್ನು ಏನೆಂದು ಬೇಡಿಕೊಂಡನು ?
2. ಕುವೆಂಪುರವರ ಕೆಲವು ಕೃತಿಗಳನ್ನು ಹೆಸರಿಸಿರಿ.
3. ಅಕ್ಬರನ ಸಮಸ್ಯೆಯನ್ನು ಬೀರಬಲ್ಲನು ಹೇಗೆ ಪರಿಹರಿಸಿದನು ?
4. ವ್ಯಾಪಾರಿಯ ಮಗನು ತಿಳಿಸಿದ ಉಪಾಯವೇನು ?
5. ಹಳ್ಳಿಯ ಯಜಮಾನನು ಏಕೆ ಜೋರಾಗಿ ಅಳಲಾರಂಭಿಸಿದನು ?

**XIV. ಈ ಮಾತನ್ನು ಯಾರು ಯಾರಿಗೆ ಹೇಳಿದರು :-** **6**

1. " ಮಗೂ , ನಿನ್ನ ತಪ್ಪಸಿಗೆ ಮೆಚ್ಚಿ ಬಂದ್ದೇನೆ ".
2. "ಭಕ್ತಿಯಿಂದ ನೀನು ಆ ಗುಡಿಗೆ ಹೋಗಿ ಕಾಳಿ ಮಾತೆಯನ್ನು ಸ್ಮರಣೆ ಮಾಡು"
3. " ತಾಯಿ , ನಮಗೆ ನೆಗಡಿ ಬಂದರೆ ಇರುವ ಒಂದು ಮೂಗಿಗೆ ಎರಡು ಕೈಗಳು ಸಾಕಾಗುವುದಿಲ್ಲ ".

**XV. ಈ ಕೆಳಗಿನ ಯಾವುದುದಾದರು ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ :-** **5**

1. ಕಾಡು ಉಳಿದರೆ ನಾಡು ಉಳಿಯುವುದು
2. ನೀವು ನೋಡಿರುವ ಯಾವುದಾದರೂ ಪ್ರೇಕ್ಷಣೀಯ ಸ್ಥಳದ ಬಗೆ ಬರೆಯಿರಿ.

**XVI. ಈ ಕೆಳಗಿನ ಗದ್ಯ ಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :- 5**

ನಮ್ಮ ದೇಶದಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಜನ್ಮವೆತ್ತಿದ್ದಾರೆ. ವಾಲ್ಮೀಕಿ, ವೇದವ್ಯಾಸ, ತುಳಸೀದಾಸ, ಕಾಳಿದಾಸರಂತಹ ಮಹಾನ್ ಕವಿಗಳು ಹುಟ್ಟಿದ ಈ ದೇಶದಲ್ಲಿಯೇ ರವೀಂದ್ರರು ಹುಟ್ಟಿದರು. ರವೀಂದ್ರರನ್ನು ಹೆಮ್ಮೆಯಿಂದ " ವಿಶ್ವ ಕವಿ " ಮತ್ತು " ಗುರುದೇವ " ಎಂದು ಕರೆಯುತ್ತಾರೆ. ನಮ್ಮ ರಾಷ್ಟ್ರಗೀತೆಯನ್ನು ಬರೆದ ಮಹಾನ್ ಕವಿ ರವೀಂದ್ರನಾಥ ಠಾಗೋರ್‌ರವರು. ಕವಿ ರವೀಂದ್ರರು ಹುಟ್ಟಿದ್ದು ಕಲ್ಕತ್ತಾ ನಗರದ ಒಂದು ಪ್ರತಿಷ್ಠಿತ ಪರಿವಾರದಲ್ಲಿ. ಇವರು ಹದಿನಾರನೇ ವಯಸ್ಸಿನಲ್ಲಿಯೇ ಇಂಗ್ಲೆಂಡಿಗೆ ಹೋಗಿ ಎರಡು ವರ್ಷ ಅಲ್ಲಿಯೇ ಇದ್ದರು. ಭಾರತಕ್ಕೆ ವಾಪಸ್ಸಾದ ನಂತರ " ಸಾಧನಾ " ಎಂಬ ಪತ್ರಿಕೆಯನ್ನು ಆರಂಭಿಸಿದರು. ಅದರಲ್ಲಿ ಉತ್ತಮವಾದ ಕಥೆಗಳನ್ನು ಬರೆಯುತ್ತಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ರವೀಂದ್ರರ ಹೆಸರು ಬಹಳ ಪ್ರಸಿದ್ಧವಾಯಿತು. ರವೀಂದ್ರರು " ಶಾಂತಿನಿಕೇತನ " ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಶಾಂತಿನಿಕೇತನವು ಸ್ವಲ್ಪ ವರ್ಷಗಳಾದ ನಂತರ " ವಿಶ್ವ ಭಾರತಿ " ಎಂಬ ಹೆಸರಿನಿಂದ ಬದಲಾವಣೆಗೊಂಡಿತು. ರವೀಂದ್ರರು ಬರೆದ " ಗೀತಾಂಜಲಿ " ಎಂಬ ಅತ್ಯುತ್ತಮ ಕೃತಿಗೆ ೧೯೧೩ರಲ್ಲಿ "ನೊಬೆಲ್ ಪ್ರಶಸ್ತಿ " ದೊರೆಯಿತು.

1. ರವೀಂದ್ರರು ಎಲ್ಲಿ ಜನಿಸಿದರು ?

2. ರವೀಂದ್ರರು ಯಾವ ಸಂಸ್ಥೆಯನ್ನು ಸ್ಥಾಪಿಸಿದರು ?

3. ರವೀಂದ್ರರ ಯಾವ ಕೃತಿಗೆ ನೊಬೆಲ್ ಪ್ರಶಸ್ತಿ ದೊರೆಯಿತು ?

4. ರವೀಂದ್ರರನ್ನು ಹೆಮ್ಮೆಯಿಂದ ಏನೆಂದು ಕರೆಯುತ್ತಾರೆ ?

5. ನಮ್ಮ ದೇಶದಲ್ಲಿ ಹುಟ್ಟಿದ ಮಹಾನ್ ಕವಿಗಳು ಯಾರು ಯಾರು ?